ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು - 560 001.

ಫೋನ್ : 080-22341391/98

ಫ್ಯಾಕ್ಸ : 080-22341393

ಕರಾಉಶಿಪ/5ನೇ ಸಾ. ಸಭೆ/2011-12/ 883

ದಿನಾಂಕ: 30/11/2011

ಇವರಿಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಎಲ್ಲ ಸದಸ್ಯರುಗಳಿಗೆ.

ಮಾನ್ಯರೇ,

ದಿನಾಂಕ 16/11/2011 ರಂದು ಶ್ರೀ. ಡಾ॥ ವಿ.ಎಸ್. ಆಚಾರ್ಯ, ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ ಹಾಗೂ ಐಟಿ, ಬಿಟಿ ಇಲಾಖೆಯ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಐದನೆಯ ಸಾಮಾನ್ಯ ಸಭೆಯ ನಡೆವಳಿಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ಈ ಸಭೆಯ ನಡುವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ 10 ದಿನದೊಳಗಾಗಿ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಕೆ.ಎಂ. ಕಾವೇರಿಯಪ್ಪ)
ಕಾರ್ಯನಿರ್ವಾಹಕ ನಿರ್ದೇಶಕರು

ಅಡಕ: ಮೇಲಿನಂತೆ.

<u>ಪ್ರತಿಗಳನ್ನು ಮಾಹಿತಿಗಾಗಿ:</u>

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು.
2) ಮಾನ್ಯ ಉನ್ನತ ಶಿಕ್ಷಣ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು, ಕರ್ನಾಟಕ ಸರ್ಕಾರ, 3ನೇ ಮಹಡಿ, ಕೊಠಡಿ ಸಂಖ್ಯೆ 315, ವಿಧಾನಸೌಧ, ಬೆಂಗಳೂರು.
3) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, 3ನೇ ಮಹಡಿ, ಕೊಠಡಿ ಸಂಖ್ಯೆ 315, ಬೆಂಗಳೂರು.
4) ಪರಿಷತ್ತಿನ ಉಪಾಧ್ಯಕ್ಷರ ಆಪ್ತ ಸಹಾಯಕರು, ಅರಮನೆ ರಸ್ತೆ, ಬೆಂಗಳೂರು.

ದಿನಾಂಕ 16/11/2011 ರಂದು ಬೆಳಗ್ಗೆ 11–00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣದಲ್ಲಿ ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನ ಐದನೆಯ ಸಾಮಾನ್ಯ ಸಭೆಯ ನಡವಳಿಗಳು.

**ಉಪಸ್ಥಿತ ಸದಸ್ಯರು**

| | |
|---|---|
| 1) | **ಡಾ॥ ವಿ.ಎಸ್. ಆಚಾರ್ಯ,**<br>ಮಾನ್ಯ ಸಚಿವರು, ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 2) | **ಡಾ॥ ಎಸ್.ಸಿ. ಶರ್ಮಾ,**<br>ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ,<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 3) | **ಪ್ರೊ. ಕೆ.ಎಂ. ಕಾವೇರಿಯಪ್ಪ,**<br>ಸದಸ್ಯ ಕಾರ್ಯದರ್ಶಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 4) | **ಪ್ರೊ. ವಿ.ಜಿ. ತಳವಾರ**<br>ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ. |
| 5) | **ಡಾ॥ ಹೆಚ್.ಬಿ. ವಾಲೀಕರ್,**<br>ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ. |
| 6) | **ಪ್ರೊ. ಈ. ಟಿ. ಪುಟ್ಟಯ್ಯ,**<br>ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ. |
| 7) | **ಪ್ರೊ. ಟಿ.ಸಿ. ಶಿವಶಂಕರಮೂರ್ತಿ,**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ. |
| 8) | **ಪ್ರೊ. ಎಸ್. ಎ. ಬಾರಿ,**<br>ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ. |
| 9) | **ಡಾ॥ ಎ. ಮುರಿಗೆಪ್ಪ,**<br>ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| 10) | **ಡಾ॥ ಕೆ. ಎಸ್. ರಂಗಪ್ಪ,**<br>ಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,<br>ಮೈಸೂರು. |
| 11) | **ಪ್ರೊ. ಬಿ.ಆರ್. ಅನಂತನ್,**<br>ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |
| 12) | **ಪ್ರೊ. ಮಂಜಪ್ಪ .ಡಿ. ಹೊಸಮನೆ,**<br>ಕುಲಪತಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ. |
| 13) | **ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್,**<br>ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ. |

Executive Director
Karnataka State Higher Education Council
Palace Road, Bangalore-01.

| | |
|---|---|
| 14) | **ಡಾ॥ ಬಿ.ವಿ. ಪಾಟೀಲ್,**<br>ಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ರಾಯಚೂರು. |
| 15) | **ಡಾ॥ ಎಸ್. ಬಿ. ದಂಡಿನ,**<br>ಕುಲಪತಿಗಳು, ತೋಟಗಾರಿಕಾ ವಿಶ್ವವಿದ್ಯಾಲಯ. |
| 16) | **ಪ್ರೊ. ಹೆಚ್. ಮಹೇಶಪ್ಪ,**<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ. |
| 17) | **ಡಾ॥ ಹಿರಿಯಣ್ಣ ಅಂಬಳಿಕೆ**<br>ಕುಲಪತಿಗಳು, ಜಾನಪದ ವಿಶ್ವವಿದ್ಯಾಲಯ. |
| 18) | **ಡಾ॥ ಎಸ್. ಬಿಸಲಯ್ಯ,**<br>(ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು) |
| 19) | **ಡಾ॥ ಎಂ. ಡಿ. ಮುತ್ತಮ್ಮ,**<br>ನಿವೃತ್ತ ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು. |
| 20) | **ಶ್ರೀ. ಕೆ. ನರಹರಿ,**<br>ನಿವೃತ್ತ ಪ್ರೊಫೆಸರ್, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು,<br>ಬೆಂಗಳೂರು. |
| 21) | **ಡಾ॥ ಆರ್. ಸುಧಾ,**<br>ನಿವೃತ್ತ ಪ್ರಾಂಶುಪಾಲರು, ಮಹಾರಾಣಿ ವಿಜ್ಞಾನ ಕಾಲೇಜು,<br>ಮೈಸೂರು. |
| 22) | **ಡಾ॥ ಆರ್.ಎಲ್.ಎಂ. ಪಾಟೀಲ್,**<br>ನಿವೃತ್ತ ರಾಜ್ಯಶಾಸ್ತ್ರ ಪ್ರೊಫೆಸರ್, ಬೆಂಗಳೂರು ವಿಶ್ವವಿದ್ಯಾಲಯ. |
| 23) | **ಡಾ॥ ಕೆ. ಚಿದಾನಂದ ಗೌಡ,**<br>(ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ) |
| 24) | **ಶ್ರೀಮತಿ. ಲತಾ ಕೃಷ್ಣರಾವ್, ಐಎಎಸ್**.<br>ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ. |
| 25) | **ಶ್ರೀ. ಕೆ.ಆರ್. ಶಶಿಧರ್, ಐಎಎಸ್**<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ. |
| 26) | **ಡಾ॥. ಎಂ. ಕೆ. ಶ್ರೀಧರ್**<br>ಸದಸ್ಯ-ಕಾರ್ಯದರ್ಶಿ, ಜ್ಞಾನ ಆಯೋಗ,<br>ವಿಶೇಷ ಆಹ್ವಾನಿತರು. |
| 27) | **ಶ್ರೀ. ಎ. ರವೀಂದ್ರ, ಐಎಎಸ್, [ನಿ] ವಿಶೇಷ ಆಹ್ವಾನಿತರು.**<br>ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು,<br>ವಿಧಾನಸೌಧ, ಬೆಂಗಳೂರು. |

Executive Director
Karnataka State Higher Education Council
Palace Road, Bangalore-01.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಡಾ॥ ಎಸ್. ಸಿ. ಶರ್ಮಾರವರು ಉಪಸ್ಥಿತರಿದ್ದು ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು, ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ (1)**

**ವಿಷಯ:** ದಿನಾಂಕ 21.07.2011 ರಂದು ಜರುಗಿದ ನಾಲ್ಕನೆಯ ಸಾಮಾನ್ಯ ಸಭೆಯ ನಡುವಳಿಗಳನ್ನು ಧೃಢೀಕರಿಸುವ ಕುರಿತು.

**ಪರಿಷತ್ತಿನ ತೀರ್ಮಾನ**

ಈ ಕೆಳಕಂಡ ತಿದ್ದುಪಡಿಯೊಂದಿಗೆ ನಡುವಳಿಗಳನ್ನು ಧೃಢೀಕರಿಸಲಾಯಿತು.

The words 'Faculty' and 'Dean' in Sec. 34 and wherever they appear in the Karnataka State Universities Act – 2000 shall be substituted by the words Faculty/School and Dean/Director.

**ವಿಷಯ ಸಂಖ್ಯೆ (2)**

**ವಿಷಯ: ಶೈಕ್ಷಣಿಕ ರಂಗದಲ್ಲಿ ಕನ್ನಡ ಭಾಷೆ ಕಲಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡಲು ತಕ್ಕ ಯೋಜನೆ ಜಾರಿಗೆ ತರುವ ಕುರಿತು ಡಾ॥ ಗೀತಾಬಾಲಿ, ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಇವರು ಸಲ್ಲಿಸಿದ ವರದಿ ಕುರಿತು.**

**ಪರಿಷತ್ತಿನ ತೀರ್ಮಾನ**

ಡಾ॥ ಗೀತಾ ಬಾಲಿ, ಕುಲಪತಿಗಳು, ಮಹಿಳಾ ವಿಶ್ವವಿದ್ಯಾನಿಲಯ, ಇವರು ಸಭೆಗೆ ಹಾಜರಿರದ ಕಾರಣ ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ನಿರ್ಧರಿಸಲಾಯಿತು.

**ವಿಷಯ ಸಂಖ್ಯೆ (3)**

**ವಿಷಯ: ಡಿಪ್ಲೋಮಾ ಇನ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್ ಕೋರ್ಸನ್ನು ಬಿ.ಕಾಂ, ಪದವಿಗೆ ತತ್ಸಮಾನವೆಂದು ಪರಿಗಣಿಸುವ ಕುರಿತು.**

**ಪರಿಷತ್ತಿನ ತೀರ್ಮಾನ**

ಡಿಪ್ಲೋಮಾ ಇನ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್ ಕೋರ್ಸನ್ನು ಬಿ.ಕಾಂ, ಪದವಿಗೆ ತತ್ಸಮಾನವೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ಪರಿಷತ್ತು ಅಭಿಪ್ರಾಯ ಪಟ್ಟಿತು.

Executive Director
Karnataka State Higher Education Council
Palace Road, Bangalore-01.

**ವಿಷಯ ಸಂಖ್ಯೆ (4)**

**ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯಕಲಾಪಗಳ (KSHEC Procedure Relating to Meetings of the Council) ಪರಿನಿಯಮಾವಳಿಗಳನ್ನು ಸರ್ಕಾರದ ಸೂಚನೆಯಂತೆ ಪುನಃ ಪರಿಶೀಲಿಸುವ ಕುರಿತು.**

**ಪರಿಷತ್ತಿನ ತೀರ್ಮಾನ**

ಈ ವಿಷಯದ ಬಗ್ಗೆ ಸರ್ಕಾರವು ಸೂಚಿಸಿರುವ ತಿದ್ದುಪಡಿಯನ್ನು ಅನುಮೋದಿಸಿ ಪರಿನಿಯಮಾವಳಿಗಳಿಗೆ ಒಪ್ಪಿಗೆ ನೀಡಲಾಯಿತು.

**ವಿಷಯ ಸಂಖ್ಯೆ (5)**

**ವಿಷಯ: ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸಿನಂತೆ "ಕರ್ನಾಟಕ ವಿದ್ಯಾರ್ಥಿ ವೇತನ" ಯೋಜನೆ ಪ್ರಾರಂಭಿಸುವ ಕುರಿತು.**

**ಪರಿಷತ್ತಿನ ತೀರ್ಮಾನ**

ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸನ್ನು ಕಾರ್ಯರೂಪಕ್ಕೆ ತರಲು ಆಯಾ ವಿಶ್ವವಿದ್ಯಾನಿಲಯಗಳು ಅವರ ಸ್ವಂತ ವೆಚ್ಚದ; ಸಾರ್ವಜನಿಕ ಮತ್ತು ಖಾಸಗಿ ಮೂಲಕ ಭಾಗವಹಿಸುವುದರ ಮೂಲಕ ನಿಧಿಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಇತರ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಮಾಡಬಹುದು ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿತು.

**ವಿಷಯ ಸಂಖ್ಯೆ (6)**

**ವಿಷಯ: ದಿನಾಂಕ: 01.01.2006 ರ ಪೂರ್ವದಲ್ಲಿ ನಿವೃತ್ತರಾದ ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳ ಬೋಧಕ ವರ್ಗದ ಸಿಬ್ಬಂದಿಗಳ ನಿವೃತ್ತಿ ವೇತನವನ್ನು ಪುನರ್ ವಿಮರ್ಶಿಸುವ ಕುರಿತು.**

**ಪರಿಷತ್ತಿನ ತೀರ್ಮಾನ**

ಭಾರತ ಸರ್ಕಾರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಮಂತ್ರಾಲಯ, ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ 15–F/2009 IFD/U ದಿನಾಂಕ: 11.3.2010 ಲ್ಲಿ ಸೂಚಿಸಿರುವಂತೆ ಕೇಂದ್ರೀಯ ವಿಶ್ವವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳಿಗೆ ಅನ್ವಯವಾಗುವ ಯು.ಜಿ.ಸಿ ವೇತನ ಶ್ರೇಣಿ ಪಿಂಚಣಿಯ ಸೌಲಭ್ಯವನ್ನು ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಹಾಗೂ ಮಹಾವಿದ್ಯಾಲಯಗಳಲ್ಲಿ ಸೇವೆಯಲ್ಲಿದ್ದು 01.01.2006ರ ಪೂರ್ವದಲ್ಲಿ ನಿವೃತ್ತರಾದ ಯು.ಜಿ.ಸಿ ವೇತನ ಶ್ರೇಣಿಯ ಶಿಕ್ಷಕರುಗಳಿಗೂ ನೀಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಭಿಪ್ರಾಯ ವ್ಯಕ್ತಪಡಿಸಿತು.

Executive Director
Karnataka State Higher Education Council
Palace Road, Bangalore-01.

ವಿಷಯ ಸಂಖ್ಯೆ (7)

**Sub: Proposal of Intel Technology India Pvt Ltd for implementation of Industry relevant embedded systems Curriculum in PG Degree & Diplomas.**

**ಪರಿಷತ್ತಿನ ತೀರ್ಮಾನ**

**Embedded Systems** ವಿಷಯವನ್ನು ಸಂಬಂಧಪಟ್ಟ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಪಠ್ಯ ಕ್ರಮಗಳಲ್ಲಿ ಅಳವಡಿಸಿ ಅವುಗಳನ್ನು ಭೋಧಿಸುವವರಿಗೆ ನಿಯಮಾನುಸಾರ ತರಬೇತಿ ಕೊಡಲು ವಿಶ್ವವಿದ್ಯಾಲಯಗಳು ಕ್ರಮ ಕೈಗೊಳ್ಳಬಹುದು ಎಂಬುದಾಗಿ ಪರಿಷತ್ತು ಅಭಿಪ್ರಾಯ ಪಟ್ಟಿತು.

ವಿಷಯ ಸಂಖ್ಯೆ (8)

**Sub: Granting exemption for the candidates who have been awarded Ph.D Degree prior to 2009 from completing NET/SLET/SET examinations to become eligible for faculty positions in the University and College- reg.**

**ಪರಿಷತ್ತಿನ ತೀರ್ಮಾನ**

The Council is of the opinion that the exemption given to the Ph.D degree holders who have completed the Ph.D degrees under the U.G.C (Minimum standards and Procedure for Awards of M.Phil/Ph.D Degree) Regulations, 2009 may also be extended to those who have completed Ph.D degrees prior to the implementation of the above regulations where course work was not compulsory.

ವಿಷಯ ಸಂಖ್ಯೆ (9)

**ವಿಷಯ: ಕೊಡಗಿನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಬಗ್ಗೆ.**

**ಪರಿಷತ್ತಿನ ತೀರ್ಮಾನ**

ಕೊಡಗಿನಲ್ಲಿ ಒಂದು ಕೇಂದ್ರೀಯ ವಿಶ್ವವಿದ್ಯಾಲಯದ ಅಗತ್ಯವಿದ್ದು ಅದನ್ನು ಸ್ಥಾಪನೆ ಮಾಡುವುದಕ್ಕೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಪರಿಷತ್ತು ಅಭಿಪ್ರಾಯ ಪಟ್ಟಿತು.

ವಿಷಯ ಸಂಖ್ಯೆ (10)

**Sub: Opening of Sectorial Universities – opinion regarding.**

**ಪರಿಷತ್ತಿನ ತೀರ್ಮಾನ**

ಇನ್ನು ಮುಂದೆ ರಾಜ್ಯದಲ್ಲಿ ಕೃಷಿ ವಿಜ್ಞಾನ ವಿಷಯದಲ್ಲಿ **"Sectorial Universities"** ಸ್ಥಾಪನೆ ಮಾಡುವ ಅಗತ್ಯ ಬಂದರೆ "Indian Council for Agriculture Research" ನ್ನು ಸಂಪರ್ಕಿಸಿ ಕ್ರಮ ಕೈಗೊಳ್ಳುವುದು ಸೂಕ್ತ ಎಂಬುದಾಗಿ ಪರಿಷತ್ತು ಅಭಿಪ್ರಾಯ ಪಟ್ಟಿತು.

Executive Director
Karnataka State Higher Education Council
Palace Road, Bangalore-01.

**ವಿಷಯ ಸಂಖ್ಯೆ (11)**

**ವಿಷಯ: ಡಿ.ಎಡ್ ಪದವಿ ಪಡೆದವರು ನೇರವಾಗಿ ಒಂದು ವರ್ಷದ ಬಿ.ಇಡಿ ಕೋರ್ಸಿಗೆ ಅವಕಾಶ ಕಲ್ಪಿಸುವ ಕುರಿತು.**

**ಪರಿಷತ್ತಿನ ತೀರ್ಮಾನ**

ಡಿ.ಎಡ್ ಎಂಬುದು ಎರಡು ವರ್ಷದ ಡಿಪ್ಲೋಮಾ ಕೋರ್ಸು ಮಾತ್ರ ಆಗಿದ್ದು ಪ್ರಸ್ತುತ ಬಿ.ಎಡ್ ಕೋರ್ಸಿಗೆ ಸೇರಲು ಪದವೀದರರು ಮಾತ್ರ ಅರ್ಹರಾಗಿರುವುದರಿಂದ ಡಿ.ಎಡ್ ಡಿಪ್ಲೋಮಾ ಮಾಡಿದವರನ್ನು ನೇರವಾಗಿ ಬಿ.ಎಡ್ ಪದವಿ ಕೋರ್ಸಿನ ಪ್ರವೇಶಕ್ಕೆ ಅವಕಾಶ ಕಲ್ಪಿಸುವುದು ಸರಿಯಲ್ಲ ಎಂಬುದಾಗಿ ಪರಿಷತ್ತು ಅಭಿಪ್ರಾಯ ಪಟ್ಟಿತು.

**ವಿಷಯ ಸಂಖ್ಯೆ (12)**

**ವಿಷಯ: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖಾ ವತಿಯಿಂದ ಸ್ಥಾಪಿಸಲ್ಪಟ್ಟ ಬಿಟಿ ಫಿನಿಷಿಂಗ್ ಸ್ಕೂಲುಗಳಲ್ಲಿ ಪಿ.ಜಿ ಡಿಪ್ಲೋಮಾ ಕೋರ್ಸುಗಳನ್ನು ಪ್ರಾರಂಭಿಸಲು ಏಕರೂಪದ ಪರಿನಿಯಮಾವಳಿಗಳು ಹಾಗೂ ಪಠ್ಯಕ್ರಮವನ್ನು ಅಳವಡಿಸಿದ್ದನ್ನು ಅನುಸಮರ್ಥನೆ ಮಾಡುವ ಬಗ್ಗೆ.**

**ಪರಿಷತ್ತಿನ ತೀರ್ಮಾನ**

ಪ್ರಸ್ತಾವನೆಯಲ್ಲಿ ಕಾಣಿಸಿದ 9 ಪಿ.ಜಿ ಡಿಪ್ಲೋಮಾ ಕೋರ್ಸುಗಳ ಬಗ್ಗೆ ಸಿದ್ಧಪಡಿಸಲಾದ ಏಕರೂಪದ ಕರಡು ಪರಿನಿಯಮಾವಳಿಗಳ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಕ್ರಮವನ್ನು ಅನುಸಮರ್ಥನೆ ಮಾಡಲಾಯಿತು.

**ವಿಷಯ ಸಂಖ್ಯೆ (13)**

**Sub: Proposal of Sun Plus Technologies, Bangalore for implementation 'MeritQ' feedback System in Higher Education Institutions of Karnataka.**

**ಪರಿಷತ್ತಿನ ತೀರ್ಮಾನ**

**"Feedback System"** ನ್ನು ಈಗಾಗಲೇ ಅಳವಡಿಸಲಾಗಿದೆ ಎಂಬುದಾಗಿ ಕುಲಪತಿಗಳು ಸೂಚಿಸಿದ ಆಧಾರದ ಮೇಲೆ ಈ ವಿಷಯವನ್ನು ಕೈ ಬಿಡಲಾಯಿತು.

Executive Director
Karnataka State Higher Education Council
Palace Road, Bangalore-01.

ವಿಷಯ ಸಂಖ್ಯೆ (14)

**ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರ ವಿತರಿಸುವಲ್ಲಿ ಏಕರೂಪತೆ ತರುವುದು.**

**<u>ಪರಿಷತ್ತಿನ ತೀರ್ಮಾನ</u>**

ಈ ವಿಷಯವನ್ನು ಪರಿಶೀಲಿಸಲು ಕುಲಪತಿಗಳ ಸಮಿತಿಯನ್ನು ಕೆಳಕಂಡಂತೆ ರಚಿಸಲಾಯಿತು.

1. ಪ್ರೊ. ದಂಡಿನ, ಕುಲಪತಿಗಳು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
2. ಪ್ರೊ. ಶಿವಶಂಕರಮೂರ್ತಿ, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
3. ಪ್ರೊ. ಬಿ. ಆರ್. ಅನಂತನ್, ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ಪ್ರೊ. ಎಸ್. ಎ. ಬಾರಿ, ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಸಮಿತಿಯ ಅಧ್ಯಕ್ಷರ ಹೆಸರನ್ನು ಸೂಚಿಸಲು ಪರಿಷತ್ತಿನ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.

**ಈ ಸಭೆಯ ಕೊನೆಯಲ್ಲಿ ಶ್ರೀಮತಿ ಲತಾ ಕೃಷ್ಣರಾವ್, ಐಎಎಸ್, ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರು ಈ ಕೆಳಕಂಡ ವಿಷಯಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲು ಸೂಚಿಸಿದರು.**

1. ಎಲ್ಲಾ ವಿಶ್ವವಿದ್ಯಾನಿಲಯಗಳ ಸೆಮಿಸ್ಟರ್ ಪದ್ಧತಿಯನ್ನು ಸ್ನಾತಕೋತ್ತರ (ಪಿ.ಜಿ) ಮತ್ತು ಸ್ನಾತಕ (ಯುಜಿ) ಕೋರ್ಸುಗಳಿಗೂ ಅಳವಡಿಸಿಕೊಳ್ಳತಕ್ಕದ್ದು.

2. ವಿಶ್ವವಿದ್ಯಾಲಯ ಧನಸಹಾಯ ಆಯೋಗದಲ್ಲಿ (UGC) ಯಾವುದೇ ನೀತಿ–ನಿರೂಪಣೆಗಳಿಗೆ ಸಂಬಂಧಪಟ್ಟ ವಿಷಯಗಳು ಉದಾಹರಣೆಗೆ ಹೊಸ ವಿಷಯಗಳ ಸೇರ್ಪಡೆ, ನಿಯಮ ಮತ್ತು ಪರಿನಿಯಮಗಳ ಬದಲಾವಣೆ ಮುಂತಾದವುಗಳು ಇದ್ದಲ್ಲಿ ಅಂತಹ ವಿಷಯಗಳನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಗಮನಕ್ಕೆ ತರತಕ್ಕದ್ದು.

3. ನಾಗರಿಕ ಸನ್ನದ್ದು (Citizen Charter) ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಹಲವು ವಿಧವಾದ ಸೇವೆಗಳನ್ನು ಅಂದರೆ, ಮಹಾವಿದ್ಯಾಲಯಗಳ, ವ್ಯಾಸಂಗಗಳ ವಿವರ, ಪ್ರವೇಶ ನೀತಿ, ಪ್ರತಿ ವ್ಯಾಸಂಗಕ್ಕೆ ಲಭ್ಯವಿರುವ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ, ಪ್ರವೇಶಕ್ಕೆ ಅಗತ್ಯವಾದ ಅರ್ಹತೆಗಳ ವಿವರ, ಮೌಲ್ಯಮಾಪನ ಹಾಗೂ ಫಲಿತಾಂಶಗಳು, ಪದವಿ ಪ್ರಮಾಣಪತ್ರದ ನೀಡಿಕೆ ಇತ್ಯಾದಿಗಳ ವಿವರಗಳನ್ನು ವಿದ್ಯಾರ್ಥಿಗಳಿಗೆ, ಅವರ ಪಾಲಕ/ ಪೋಷಕರಿಗೆ ಮತ್ತು ಸಾರ್ವಜನಿಕರಿಗೆ ಒದಗಿಸಬೇಕು. ಹಲವು ಸಂಘ ಸಂಸ್ಥೆಗಳು ಈಗಾಗಲೇ ಈ ದಿಸೆಯಲ್ಲಿ ಕ್ರಮಕೈಕೊಂಡಿದ್ದು ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಹಿಂದೆ ಬೀಳಬಾರದು ಆದುದರಿಂದ ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯವು ತಮ್ಮ “ ನಾಗರಿಕ ಸನ್ನದ್ದು” (Citizen Charter) ನ್ನು ಸಿದ್ದ ಪಡಿಸಿ ಸರಕಾರದ ಅನುಮೋದನೆಗೆ 15 ದಿನದೊಳಗಾಗಿ ಸಲ್ಲಿಸಬೇಕು.

4. ಸಿಂಡಿಕೇಟ್ ನಡವಳಿಗಳನ್ನು ವಿಶ್ವವಿದ್ಯಾನಿಲಯಗಳು ಉನ್ನತ ಶಿಕ್ಷಣ ಇಲಾಖೆಗೆ ತಪ್ಪದೇ ಕಳುಹಿಸಿಕೊಡುವುದು.

Executive Director
Karnataka State Higher Education Council
Palace Road, Bangalore-01.

5. ವಿಶ್ವವಿದ್ಯಾಲಯಗಳು ಅನುಶಾಸನ, ಪರಿನಿಯಮಾವಳಿ, ನಿಯಮಾವಳಿಗಳನ್ನು ಕುಲಾಧಿಪತಿಗಳ ಅಂಗೀಕಾರಕ್ಕಾಗಿ ಸರಕಾರಕ್ಕೆ ಕಳುಹಿಸುವಾಗ ನಿಗದಿತ ನಮೂನೆಗಳನ್ನು ಕಳುಹಿಸುತ್ತಿರುವುದಿಲ್ಲವೆಂಬುದನ್ನು ಗಮನಿಸಲಾಗಿದೆ. ಎಷ್ಟೋ ಪ್ರಕರಣಗಳಲ್ಲಿ ಮೇಲ್ಕಂಡವುಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಸಹಿ ಹಾಗೂ ಮೊಹರುಗಳಿಲ್ಲದೇ ಜೆರಾಕ್ಸ್ ಪ್ರತಿಗಳನ್ನು ಕಳುಹಿಸಲಾಗುತ್ತಿದೆ. ಇನ್ನು ಮುಂದೆ, ಅನುಶಾಸನಗಳನ್ನು, ಪರಿನಿಯಮಾವಳಿಗಳನ್ನು, ನಿಯಮಗಳನ್ನು, ಕರ್ನಾಟಕ ರಾಜ್ಯ ಅಧಿನಿಯಮಗಳ ಅಡಿಯಲ್ಲಿ ಮೂಲಪ್ರತಿಯ ಪ್ರತಿಯೊಂದು ಪುಟಕ್ಕೆ ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಕುಲಸಚಿವರ ಸಹಿಗಳು ಇರುವ ಪ್ರತಿಗಳನ್ನು ಮಾತ್ರ ಕಳುಹಿಸಲು ತಿಳಿಸಲಾಗಿದೆ.

6. ಸಂಯೋಜಿತ ಸರ್ಕಾರಿ ಕಾಲೇಜುಗಳು UGC Recognition/Grants ಗಳ ಬಗ್ಗೆ ಪ್ರಸ್ತಾವನೆ ಕಳುಹಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ತಪ್ಪದೇ ಅಂತಹ ಪ್ರಸ್ತಾವನೆಗಳನ್ನು ಕೌಂಟರ್ ಸಹಿ ಮಾಡಿ ತಡ ಮಾಡದೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ ಕಳುಹಿಸಿ ಕೊಡತಕ್ಕದ್ದು.

7. ವಿಶ್ವವಿದ್ಯಾಲಯಗಳ ಅಧೀನಕ್ಕೊಳಪಟ್ಟ ಸರ್ಕಾರಿ ಮಹಾವಿದ್ಯಾಲಯಗಳು ಹೊಸದಾದ ಸ್ನಾತಕ/ಸ್ನಾತಕೋತ್ತರ ವ್ಯಾಸಂಗಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿದಾಗ ಅವುಗಳು ಪೂರೈಸಬೇಕಾದ ಷರತ್ತುಗಳನ್ನು ಪಟ್ಟಿಮಾಡಿ ಶಿಫಾರಸ್ಸು ಮಾಡತಕ್ಕದ್ದು. ಅಲ್ಲದೆ ಸರಕಾರಿ ಕಾಲೇಜುಗಳಲ್ಲಿ ಹೆಚ್ಚುವರಿ ನಿಗದಿತ ಸೀಟು, ಹೆಚ್ಚುವರಿ ಪ್ರವೇಶಾತಿ ಮಾಡಿದರೆ ಅದನ್ನು ಅನುಸಮರ್ಥನೆ ಮಾಡತಕ್ಕದ್ದು.

8. ವಿಶ್ವವಿದ್ಯಾಲಯಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಮಹಾವಿದ್ಯಾಲಯಗಳ ಬಗ್ಗೆ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕಾಲಕಾಲಕ್ಕೆ ಕೇಳುವ, ಉದಾಹರಣೆಗೆ ಮೊದಲನೆ ವರ್ಷದ ಪ್ರವೇಶಾತಿ ಮತ್ತಿತರ ಮಾಹಿತಿ ಮತ್ತು ಅಂಕಿ-ಸಂಖ್ಯೆಗಳನ್ನು ಅವರಿಗೆ ಕಡಿಮೆ ಅಂದರೆ ಪ್ರವೇಶಾತಿ ಮುಗಿದ ಒಂದು ತಿಂಗಳ ಒಳಗೆ ಕಳುಹಿಸಿಕೊಡತಕ್ಕದ್ದು.

9. ಬ್ಲಾಕ್ ಮತ್ತು ಅಭಿವೃದ್ಧಿ ಅನುದಾನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸದೇ ಇರುವ ವಿಶ್ವವಿದ್ಯಾಲಯಗಳು ತಕ್ಷಣವೇ ಸಲ್ಲಿಸತಕ್ಕದ್ದು ಮತ್ತು ಅಭಿವೃದ್ಧಿ ಅನುದಾನದ ಪ್ರಸ್ತಾವನೆಯು ಅಗತ್ಯಕ್ಕೆ ತಕ್ಕುದಾದ ರೀತಿಯಲ್ಲಿ ಇರಬೇಕು. ಯಾವುದೇ ಸಂದರ್ಭದಲ್ಲಿಯೂ ನಿಗದಿಪಡಿಸಿರುವ ಅಭಿವೃದ್ಧಿ ಅನುದಾನಕ್ಕಿಂತಲೂ ಹೆಚ್ಚಿನ ವೆಚ್ಚ ಮಾಡಬಾರದು.

10. ವಿಶ್ವವಿದ್ಯಾಲಯಗಳಿಗೆ ಅಗತ್ಯವಾದ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸರ್ಕಾರಕ್ಕೆ ಅನುದಾನ ನೀಡಲು ಕಷ್ಟ ಸಾಧ್ಯವಾಗಿರುವುದರಿಂದ, ವಿಶ್ವ ವಿದ್ಯಾಲಯಗಳು ನಬಾರ್ಡ್ (NABARD) ಸಂಸ್ಥೆಯಿಂದ ಸಾಲ ಪಡೆಯುವ ಕುರಿತು ಪರಿಶೀಲಿಸ ಬೇಕೆಂದು ತಿಳಿಸಿದರು.

| | | |
|---|---|---|
| ಸಹಿ/- | ಸಹಿ/- | ಸಹಿ/- |
| **ಡಾ॥ ವಿ.ಎಸ್. ಆಚಾರ್ಯ** | **ಡಾ॥ ಎಸ್. ಸಿ. ಶರ್ಮಾ** | **ಡಾ॥ ಕೆ.ಎಂ. ಕಾವೇರಿಯಪ್ಪ** |
| ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯ-ಕಾರ್ಯದರ್ಶಿಗಳು |

Executive Director
Karnataka State Higher Education Council
Palace Road, Bangalore-01.